ಬೇಕಾದ್ದು ಇಲ್ಲ ಎಂದು ಅವರು ಹೇಳಿದ್ದಾರೆ. ಲಾ ಆಂಡ್ ಆರ್ಡರನ್ನು ಮೈನ್‌ಟೈನ್ ಮಾಡಬೇಕಾದ್ದು ಸರ್ಕಾರದ ಕರ್ತವ್ಯ; ಸರ್ಕಾರದ ಕರ್ತವ್ಯವನ್ನು ನಿರ್ವಹಣೆ ಮಾಡುವ ಪ್ರಯತ್ನದಲ್ಲಿ ಸಂದರ್ಭ ಬಂದಾಗ ಗುಂಡು ಹೊಡೆಯಬೇಕಾಗಿ ಬಂತು; ಇಂತಿಂತಹ ಕಾರಣಗಳಿಂದ ಗೋಲೀಬಾರ್ ಮಾಡಬೇಕಾಗಿ ಬಂತು, ಮತ್ತೊಂದನ್ನು ಮಾಡಬೇಕಾಗಿ ಬಂತು ಎಂದು ಇಷ್ಟೆಲ್ಲಾ ಅವರು ಹೇಳಿದ್ದಾರೆ. ಸರ್ಕಾರ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಕಾರ್ಮಿಕ ವರ್ಗದವರು ಹಾಗೂ ಮುಖಂಡರುಗಳ ಆಟಿಟ್ಯೂಡ್ ಅನ್‌ರೀಸನ್‌ಬಲ್ ಆಗಿ ಕಂಡು ಬಂತು, ಅದರ ಫಲವಾಗಿ ಗಲಾಟೆ ಆಯಿತು, ಜನರ ಹಿತವನ್ನು ರಕ್ಷಣೆ ಮಾಡುವ ಕಾರಣದಿಂದ ಲಾಠಿ ಚಾರ್ಜ್ ಮತ್ತು ಗೋಲೀಬಾರ್ ಮಾಡುವ ಪರಿಸ್ಥಿತಿ ಬಂತು ಎಂದು ಅವರು ಹೇಳಿದ್ದಾರೆ. ಇಷ್ಟೆಲ್ಲಾ ಸರಿಯಾಗಿದ್ದರೆ ನಾನು ಅವರನ್ನು ಒಂದು ಮಾತನ್ನು ಕೇಳುತ್ತೇನೆ. 'Justice should not only be done but must appear to have been done'. ಹಾಗಿದ್ದರೆ ಈ ಬಗ್ಗೆ ಅವರು ನ್ಯಾಯಾಂಗ ವಿಚಾರಣೆಗೆ ಏತಕ್ಕೆ ಒಪ್ಪಿಕೊಳ್ಳುವುದಿಲ್ಲ ಅನ್ನುತ್ತಾರೆ? ಇಷ್ಟೆಲ್ಲಾ ಸರಿಯಿರುವಾಗ, ಕಾರ್ಮಿಕರದು ತಪ್ಪು, ಕಾರ್ಮಿಕರ ಮುಖಂಡರದು ತಪ್ಪು; ಪೋಲೀಸರದು ಸರಿಯಾಗಿದೆ; ಹೀಗಿದ್ದರೂ ವಿರೋಧಪಕ್ಷದವರು ಅಡ್ಜರ್ನ್‌ಮೆಂಟ್ ಮೋಷನ್ ತರುತ್ತಿದ್ದಾರೆ, ಇದು ಸರಿಯಲ್ಲ ಎಂದರೆ ಅವರು ಹೇಳಿರುವುದು ಒಂದು ವೇಳೆ ಸರಿ ಇರಬಹುದು ಎಂದು ಇಟ್ಟುಕೊಳ್ಳೋಣ. ಇದು ಒಂದು ಕಡೆಯ ಅಭಿಪ್ರಾಯ. ಇನ್ನೊಂದು ಕಡೆ ಇದರಲ್ಲಿ ಯಾರ ತಪ್ಪು ಏನು ಎಂಬುದನ್ನು ತಿಳಿಯುವುದಕ್ಕೆ ಒಬ್ಬರು ಬೇಕಲ್ಲವೇ? ಇನ್ನು ಎರಡನೆಯದಾಗಿ ಯಾವ ಒಂದು ಪಕ್ಷಪಾತವಿಲ್ಲದೇ ಒಬ್ಬ ವ್ಯಕ್ತಿಯ ಕಮಿಷನ್ ಮಾಡಿ ಅವರಿಂದ ಒಂದು ರಿಪೋರ್ಟ್ ಬಂದಿದ್ದರೆ, ಅವರು ಹೇಳುವುದು ಸರಿ ಎಂದು ಹೇಳಿದರೆ ಅದನ್ನು ಒಪ್ಪಬೇಕಾದ್ದು ನಿಜ. ಉದಾಹರಣೆಗೆ ಮಧುಗಿರಿ ಪ್ರಕರಣದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಯಿತು; ಸರ್ಕಾರ ಮಾಡಿದ್ದು ಸರಿ ಎಂದು ವರದಿ ಬಂತು. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ವಿಚಾರದಲ್ಲಿ ಕೂಡ ಅವರು ಒಂದು ನ್ಯಾಯಾಂಗ ವಿಚಾರಣೆ ಮಾಡಿ ಒಂದು ವರದಿ ಬಂದಾಗ, ಈಗಲೂ ಸರ್ಕಾರ ಮಾಡಿರುವುದು ಸರಿ ಎಂದು ಬಂದರೆ ನಾವು ಒಪ್ಪಿಕೊಳ್ಳುತ್ತೇವೆ. ಹಾಗೆ ನ್ಯಾಯಾಂಗ ವಿಚಾರಣೆಗೆ ಒಪ್ಪುವುದಿಲ್ಲ ಎಂದರೆ ಈ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತಳ್ಳಿಹಾಕಬೇಕು ಎಂದು ಹೇಳಿದರೆ ನಾವು ಅವರ ವಾದಕ್ಕೆ ಬೆಲೆ ಕೊಡುವುದಕ್ಕೆ ಸಾಧ್ಯವಿಲ್ಲ. ಕ್ಷಮಿಸಬೇಕು ಮಾನ್ಯ ಅಧ್ಯಕ್ಷರೇ, ನಾವು ತಮಗೆ ಎಷ್ಟು ಗೌರವವನ್ನು ಕೊಡಬೇಕೋ ಅಷ್ಟು ಗೌರವವನ್ನು ಕೊಡುವುದರಲ್ಲಿ ಯಾವ ವಿಚಾರದಲ್ಲಿಯೂ ನಾವು ಹಿಂದೆ ಹೋಗುವವರಲ್ಲ, ಆದರೆ ಸರ್ಕಾರದ ಈ ಒಂದು ನೀತಿಯನ್ನು, ಅವರ ಒಂದು ನಿಲುವನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತೇವೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈ ದಿವಸ ಈ ಸಭೆಯ ಮುಂದೆ ಈ ಒಂದು ಗಹನವಾದ ವಿಚಾರ ಚರ್ಚೆಗೆ ಬಂದು ನಡವಳಿಕೆ ಕೂಡ ಉನ್ನತಮಟ್ಟದಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ನಾನು ಸಂತೋಷ ಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೇರೆ ಪಕ್ಷದವರು ಕೊಟ್ಟಿರತಕ್ಕಂಥ ನಿಲುವಳಿಸೂಚನೆಯನ್ನು ನಾನು ನೋಡಿದ್ದೇನೆ. ಇದರಲ್ಲಿರತಕ್ಕಂಥ ಕೆಲವು ವಿಚಾರಗಳ ಬಗ್ಗೆ ನಾವು ಗಮನಹರಿಸತಕ್ಕಂಥಾದ್ದು ಇದೆ. ಸರ್ಕಾರದವರು ಕೂಡ ಅದು ನಡೆದಿಲ್ಲ ಎಂದು ನಿರಾಕರಣೆ ಮಾಡಿಲ್ಲ. ಸಂದರ್ಭ ಏನಿದೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ನಾನು ಏತಕ್ಕೆ ಈ ಸಮಯದಲ್ಲಿ ನಿಲುವಳಿ ಸೂಚನೆಯ ಪ್ರಸ್ತಾಪ ಆಗುವುದಕ್ಕೆ ಅವಕಾಶ ಕೊಟ್ಟೆ ಎಂದರೆ ಇಂತಹ ಸಮಯದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾಪವಾಗತಕ್ಕಂಥ ದಿವಸ ಇಂತಹ ಲಾ ಆಂಡ್ ಆರ್ಡರ್ ಮೈನ್‌ಟೈನ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಈ ನಿಲುವಳಿ ಸೂಚನೆ ಬಂದಾಗ ಅಂತಿಮ ನಿರ್ಣಯ ಮಾಡಿಕೊಡತಕ್ಕಂಥ ಯೋಚನೆ ಮಾಡಿ, ಈ ತೀರ್ಮಾನವನ್ನು ಕೊಟ್ಟು ಮತ್ತೆಮತ್ತೆ ಇಂತಹ ವಿಚಾರಗಳು ಇಲ್ಲಿ ಬರದೇ ಇರತಕ್ಕಂಥ ರೀತಿಯಲ್ಲಿ ಈ ಒಂದು ತೀರ್ಮಾನ ಇರಲಿ ಎನ್ನುವ ದೃಷ್ಟಿಯಿಂದ ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ಅದರ ಪ್ರಸ್ತಾಪಕ್ಕೆ ಅವಕಾಶ ಕೊಟ್ಟಿದ್ದೇನೆ. ಈ ಹಿನ್ನೆಲೆಯಲ್ಲಿ ೧೯೫೬ನೇ ಇಸವಿ ಮಾರ್ಚ್ ೧೧ನೇ ತಾರೀಖಿನಲ್ಲಿ ಈ ಸದನದಲ್ಲಿ ಕೊಟ್ಟಂಥ ಏನೊಂದು ತೀರ್ಮಾನ ಇದೆ ಅದನ್ನು ಬದಲಾವಣೆ ಮಾಡುವುದಕ್ಕೆ ಯಾವ ವಿಧವಾದ ಕಾರಣಗಳೂ ಇಲ್ಲ ಎಂದು ನನ್ನ ಅಭಿಪ್ರಾಯ. ಆ ತೀರ್ಮಾನ ಬಹಳ ಪ್ರಾಮುಖ್ಯವಾದುದು. ಅದನ್ನು ಯಾವಾಗಲೂ ಪಾಲನೆ ಮಾಡತಕ್ಕಂಥಾದ್ದು